**ದಿನಾಂಕಃ 15-02-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ.ಹೆಚ್.ಎಂ.ಎಸ್.ವಕೀಲರಿಂದಃ**

ಶ್ರೀಪಾಲ್ ಜೈನ್ ನನ್ನ ಅಣ್ಣನಾಗಿರುತ್ತಾನೆ. ಗೌತಮ್ ಎಂಟರಪ್ರೈಸಸ್ ಗೆ ನಾನೊಬ್ಬನೆ proprietor ಆಗಿರುತ್ತೇನೆ. ಆರೋಪಿ ಹೆಚ್.ಎಂ.ಬಡಿಗೇರ ರವರು ನಮ್ಮ ಅಂಗಡಿಗೆ ಬಂದು ಮಟಿರಿಯಲ್ ಖರೀದಿಸುತ್ತಿದ್ದರು ಆ ಮೂಲಕ ಅವರು ಸುಮಾರು 7/8 ವರ್ಷಗಳಿಂದ ಪರಿಚಯವಾಗಿರುತ್ತಾರೆ. ಮೊದಲು ಎರಡು-ಮೂರು ಬಾರಿ ಹೆಚ್.ಎಂ.ಬಡಿಗೇರ ರವರು ನಗದು ಮೂಲಕ ವ್ಯವಹಾರ ಮಾಡಿರುತ್ತಾರೆ ನಂತರ ಕ್ರೆಡಿಟ್ ಆಧಾರದಲ್ಲಿ ವ್ಯವಹಾರ ಮಾಡುತ್ತಿದ್ದರು. ಅವರ ಮ್ಯಾನೇಜರ ವಿಜಯಕುಮಾರ ಬಿರಾದರ ರವರು ಮಟಿರಿಯಲ್ ಗಳನ್ನು ತೆಗೆದು ಕೊಂಡು ಹೋಗುತ್ತಿದ್ದರು. ನಾನು ಆರೋಪಿತರ ಜೊತೆ ವ್ಯವಹಾರದ ಬಗ್ಗೆ ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ ಮಾನವೀಯತೆಯಿ ದೃಷ್ಠಿಯಿಂದ ವ್ಯವಹಾರ ಮಾಡಿರುತ್ತೇನೆ.

ಹೆಚ್.ಎಂ.ಬಡಿಗೇರ ರವರು ನನಗೆ ನೇರವಾಗಿ ಪರಿಚಯ ಇರಲಿಲ್ಲ ಅವರು ನನ್ನ ಅಣ್ಣನ ಮೂಲಕ ಪರಿಚಯವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಶ್ರೀಪಾಲ್ ಜೈನ್ ಹೆಚ್.ಎಂ.ಬಡಿಗೇರ ಜೊತೆ ಅನ್ಯೂನ್ಯವಾಗಿ ಇರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿ ಹೆಚ್.ಎಂ.ಬಡಿಗೇರ ಮತ್ತು ನನ್ನ ಅಣ್ಣನ ನಡುವೆ ಕೆಲವು ವ್ಯವಹಾರಗಳು ಆಗಿರುತ್ತವೆ ಎಂದರೆ ಸಾಕ್ಷಿ ಯಾವುದೇ ವ್ಯವಹಾರವಾಗಿಲ್ಲವೂ ಮತ್ತು ಆ ರೀತಿಯ ಯಾವುದೇ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2012 ರಲ್ಲಿ ಆರೋಪಿ ಹೆಚ್.ಎಂ.ಬಡಿಗೇರ ರವರು ನನ್ನ ಅಣ್ಣ ಶ್ರೀಪಾಲ್ ಜೈನ್ ರವರಿಂದ ಐದು ಲಕ್ಷ ರೂಪಾಯಿಗಳನ್ನು ಬಡ್ಡಿ ಆಧಾರದ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಅಣ್ಣ ಭದ್ರತೆಗಾಗಿ ಆರೋಪಿ ಹೆಚ್.ಎಂ.ಬಡಿಗೇರ ರವರ ಕಡೆಯಿಂದ ಏಕ್ಸಿಸ್ ಬ್ಯಾಂಕ್ ನ ಸಹಿ ಮಾಡಿದ 2 ಖಾಲಿ ಚೆಕ್ ಗಳು ಹಾಗೂ ಒಂದು ಸೈಟ್ ನ ದಾಖಲೆಯನ್ನು ಪಡೆದು ಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ಹೆಚ್.ಎಂ.ಬಡಿಗೇರ ರವರು ಆ ಹಣ ಮರುಪಾವತಿ ಮಾಡಲು ಆಗಿರಲಿಲ್ಲ ಆಗ ನನ್ನ ಅಣ್ಣ ಆ ಸೈಟ್ ನ್ನು ಮೆಹರವಾಡೆ ರವರಿಗೆ ಮಾರಾಟ ಮಾಡಿ ತನಗೆ ಬರಬೇಕಾದ

ಹಣವನ್ನು ಪಡೆದು ಕೊಂಡಿರುತ್ತಾರೆ  ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಅಣ್ಣ ನಾನೂ ಸಹ ಗೌತಮ್ ಎಂಟರಪ್ರೈಸಸ್ ನ ಜಂಟಿ ಮಾಲೀಕರು ಎಂದು ಹೇಳಿ 2016 ರಲ್ಲಿ ಆರೋಪಿ ಹೆಚ್.ಎಂ.ಬಡಿಗೇರ ರವರಿಗೆ ನನಗೆ ಪರಿಚಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ಹೆಚ್.ಎಂ.ಬಡಿಗೇರ ರವರು ನಮ್ಮ ಅಂಗಡಿಯಿಂದ ಹಣ ಪಾವತಿ ಮಾಡಿ ಮಟಿರಿಯಲ್ ಖರೀದಿಸುತ್ತಿದ್ದರು ಎಂದರೆ ಸಾಕ್ಷಿ ಕ್ರೆಡಿಟ್ ಆಧಾರದ ಮೇಲೆ ಖರೀದಿಸುತ್ತಿದ್ದರು ಎಂದು ಹೇಳುತ್ತಾರೆ.  ಆ ಸಮಯದಲ್ಲಿ ನನ್ನ ಅಣ್ಣ ಆರೋಪಿ ಹೆಚ್.ಎಂ.ಬಡಿಗೇರ ರವರ ಕಡೆಯಿಂದ ಹೆಚ್.ಡಿ.ಎಫ್.ಸಿ ಯ ಮೂರೂ ಚೆಕ್ ಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ.

ಒಬ್ಬ ವ್ಯಕ್ತಿ ಎಷ್ಟು ದಿನಗಳವರೆಗೆ ಕ್ರೆಡಿಟ್ ಆಧಾರದ ಮೇಲೆ ಮಟಿರಿಯಲ್ ಸರಬರಾಜು ಮಾಡುತ್ತೀರಾ ಎಂದರೆ ಸಾಕ್ಷಿ ಆರೋಪಿ ಹೆಚ್.ಎಂ.ಬಡಿಗೇರ ರವರು ಫೋನ್ ಮಾಡಿ ಒಟ್ಟಿಗೆ ಪೇಮೆಂಟ್ ಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ಮಟಿರಿಯಲ್ ಸರಬರಾಜು ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಆರೋಪಿ ಹೆಚ್.ಎಂ.ಬಡಿಗೇರ ರವರು  2016 ರಲ್ಲಿ ಒಮ್ಮೆ ಮಾತ್ರ ನಮ್ಮ ಅಂಗಡಿಗೆ ಬಂದು ಹೋಗಿದ್ದನ್ನು ಬಿಟ್ಟರೆ ಮತ್ತೆ ಬಂದಿಲ್ಲ ಎಂದರೆ ಸರಿಯಲ್ಲ.  ಬಿಲ್ ಪೆಂಡಿಂಗ್ ಇದ್ದ ಇನ್ವಾಯಸ್ ಗಳನ್ನು ಮಾತ್ರ ಹಾಜರು ಪಡಿಸಿರುತ್ತೇನೆ.  ಪೇಮೆಂಟ್ ಮಾಡಿರುವಂತಹ ಬಿಲ್ಲುಗಳು ನಮ್ಮ ಬಳಿ ಇರಬಹುದು.  2017 ರ ಕೊನೆಯಲ್ಲಿ ನಾವು ಸರಬರಾಜು ಮಾಡುತ್ತಿದ್ದ ಮಟಿರಿಯಲ್ ಗೆ ಬೆಲೆ ಜಾಸ್ತಿ ಎಂದು ಹೇಳಿ ಆರೋಪಿ ಹೆಚ್.ಎಂ.ಬಡಿಗೇರ ರವರು  ಎಲ್ಲಾ ಹಣ ಪಾವತಿ ಮಾಡಿ  ವ್ಯವಹಾರ ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅವರು ನಮ್ಮ ಜೊತೆ ವ್ಯವಹಾರ ನಿಲ್ಲಿಸಿದ್ದರಿಂದ ಈ ಹಿಂದೆ 2016 ರಲ್ಲಿ ಪಡೆದು ಕೊಂಡಿದ್ದ 3 ಹೆಚ್.ಡಿ.ಎಫ್.ಸಿ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿ ದಿನ ನಮ್ಮ ಅಂಗಡಿಗೆ 10 ರಿಂದ  15 ಕಸ್ಟಮರ ಗಳು ಬಂದು ಹೋಗುತ್ತಾರೆ ಅದು ಸೀಜನ್ ಮೇಲೆ ಡಿಪೆಂಡ್ ಆಗಿರುತ್ತದೆ ಎಂದು ಹೇಳುತ್ತಾರೆ.  ಒಬ್ಬನೇ ವ್ಯಕ್ತಿ 10 ಐಟಂಗಳನ್ನು ಒಂದೇ ದಿನ ಖರೀದಿ ಮಾಡಿದಾಗ ಒಂದೇ ಬಿಲ್ಲನ್ನು ಮಾಡುತ್ತೇವೆ ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ಬೇಕಾದರೆ ಬೇರೆ-ಬೇರೆ ಬಿಲ್ಲು ಮಾಡಿ ಕೊಡುತ್ತೇವೆ.  ಬಿಲ್

ನಂ.299, 300, 303 ದಿಃ 05-06-2018 ರಂದು ಒಂದೇ ದಿನ ಮಾಡಿರುತ್ತೇನೆ ಎಂದರೆ ಸರಿ. ಆರೋಪಿತರು ಯಾವುದೇ ಮಟಿರಿಯಲ್ ಗಳನ್ನು ನಮ್ಮ ಅಂಗಡಿಯಿಂದ ಖರೀದಿ ಮಾಡದೇ ಇದ್ದರೂ ಸಹ 11 ಬಿಲ್ಲುಗಳನ್ನು ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಪ್ರತಿ ಬಿಲ್ ನ ಮೇಲೆ ಆರೋಪಿ ವಿಜಯಕುಮಾರ ಬಿರಾದರ ರವರ ಸಹಿ ಇರುತ್ತದೆ ಮತ್ತು ಜಿಎಸ್.ಟಿ ನಂಬರ ಸಹ ಇರುತ್ತದೆ ಎಂದು ಹೇಳುತ್ತಾರೆ.

ಈ ಕೇಸಿನ ನಿಪಿ-1 ಹಾಗೂ ಸಿಸಿ ನಂ.188/2019 ರ ನಿಪಿ-1 ಹಾಗೂ ಪಿಸಿಆರ್ ನಂ.173/2022 ರಲ್ಲಿ ಹಾಜರು ಪಡಿಸಿದ ಚೆಕ್ ನ್ನು ನಾನೇ ಭರ್ತಿ ಮಾಡಿಕೊಂಡು ಹಾಜರು ಪಡಿಸಿದ್ದರಿಂದ ಓವರ ರೈಟಿಂಗ್ ಎಂದು ಹಿಂದೆ ಬಂದಿರುತ್ತವೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಮೂರು ಬಾರಿ ಹಾಜರು ಪಡಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬೌನ್ಸ ಆಗಿತ್ತು ನಾಲ್ಕನೇ ಬಾರಿಗೆ ಮಾತ್ರ ಓವರ ರೈಟಿಂಗ್ ಎಂದು ಬೌನ್ಸ ಆಗಿರುತ್ತದೆ, ಚೆಕ್ ನ ಮೇಲೆ ಪದೇ-ಪದೇ ಸೀಲು ಹಾಕಿದ್ದರಿಂದ ಆ ರೀತಿ ಆಗಿದೆ ಎಂದು ಹೇಳುತ್ತಾರೆ. ಮೂರು ಬಾರಿ ಚೆಕ್ ಹಾಜರು ಪಡಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂದೆ ಬಂದ ಬಗ್ಗೆ ಬ್ಯಾಂಕ್ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಈ ವಿಚಾರವನ್ನು ನನ್ನ ನೋಟಿಸ್ , ದೂರು ಮತ್ತು ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ .

ದಿಃ 06-09-2018 ರಂದು ಆರೋಪಿ ನನಗೆ ಮೂರೂ ಚೆಕ್ ಗಳನ್ನು ಕೊಟ್ಟಿದ್ದರು ಅದರಲ್ಲಿ ಒಂದು ಚೆಕ್ ಅದೇ ದಿನದ ಚೆಕ್ ಆಗಿತ್ತು ಉಳಿದ ಎರಡು ಚೆಕ್ ಗಳು ಪೋಸ್ಟ ಡೇಟೆಡ್ ಚೆಕ್ ಗಳು ಆಗಿದ್ದವು. ಚೆಕ್ ನ ಅವಧಿ ಮುಗಿಯುವ ಹಿಂದಿನ ದಿನ ಅಂದರೆ ದಿಃ 05-12-2018 ರಲ್ಲಿ ಕೊನೆಯ ಬಾರಿಗೆ ಮೂರೂ ಚೆಕ್ ಗಳನ್ನು ಬ್ಯಾಂಕ್ ಗೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಒಂದು ವೇಳೆ ಆರೋಪಿ ರೂ.7,30,274/- ಹಣ ಕೊಡುವುದು ಬಾಕಿ ಇದ್ದರೆ ಒಂದೇ ಚೆಕ್ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಬಳಿ 3 ಚೆಕ್ ಗಳು ಇದ್ದುದರಿಂದ ನಾನೇ ಅವುಗಳನ್ನು ಬೇರೆ-ಬೇರೆ ದಿನಾಂಕ ನಮೂದು ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಮೂರೂ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ

ಸರಿಯಲ್ಲ. ಆರೋಪಿ ಹೆಚ್.ಎಂ.ಬಡಿಗೇರ ರವರು ನಮ್ಮ ಅಂಗಡಿಯಲ್ಲಿ ಖರೀದಿ ಮಾಡಿದ ಮಟಿರಿಯಲ್ ಗಳ ಬಾಬ್ತು ಈ ಮೂರು ಚೆಕ್ ಗಳನ್ನು ಕೊಟ್ಟಿರದೇ ನನ್ನ ಅಣ್ಣನ ಕೈಯಲ್ಲಿ ಈ ಮೂರೂ ಚೆಕ್ ಗಳನ್ನು ಕೊಟ್ಟಿದ್ದ ಎಂದರೆ ಸರಿಯಲ್ಲ. ಮಾರ್ಚ-2018 ರಿಂದ ದಿಃ 03-07-2018 ರವರೆಗೆ 11 ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡು ನನ್ನ ಅನುಕೂಲಕ್ಕೆ ತಕ್ಕಂತೆ ಚೆಕ್ ಗಳನ್ನು ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೆ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನೇ ಅವರ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2016 ರಲ್ಲಿ ಒಂದು ಬಾರಿ ಹೊರತು ಪಡಿಸಿ ಆರೋಪಿತರು ನಮ್ಮ ಅಂಗಡಿಗೆ ಬಂದೇ ಇಲ್ಲ ಎಂದರೆ ಸರಿಯಲ್ಲ. ದಿಃ 06-09-2018 ರಂದು ಆರೋಪಿ ಹೆಚ್.ಎಂ.ಬಡಿಗೇರ ರವರು ಯಾವುದೇ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮಿಂದ ಯಾವುದೇ ಮಟಿರಿಯಲ್ ನ್ನು ಕ್ರೆಡಿಟ್ ಆಧಾರದಲ್ಲಿ ಖರೀದಿ ಮಾಡದೇ ಇದ್ದರೂ ಸಹ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರು ತಿಂಗಳು ಅಥವಾ ಒಂದು ವರ್ಷದ ಅವಧಿಯಲ್ಲಿ ಯಾರೂ ಸಹ ಕ್ರೆಡಿಟ್ ಆಧಾರದಲ್ಲಿ ಮಟಿರಿಯಲ್ ಗಳನ್ನು ಕೊಡುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕ್ರೆಡಿಟ್ ಆಧಾರದಲ್ಲಿ ಮಟಿರಿಯಲ್ ಕೊಡಬೇಕಾದರೆ ಕರಾರು ಆಗಬೇಕು ಯಾವುದೇ ವ್ಯವಹಾರ ಆಗದೇ ಇರುವ ಕಾರಣ ಆ ರೀತಿಯ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. 11 ಬಿಲ್ಲುಗಳ ಮೇಲೆ ಇರುವ ಆರೋಪಿ ವಿಜಯಕುಮಾರ ಬಿರಾದರ ರವರ ಸಹಿಗಳನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.